INDIAN JOURNAL OF HISTORY AND ARCHAEOLOGY

ISSN (e):2582-225X
Vol-3, Issue -2, July-Auguest, 2021, Page No,28-35
Peer Reviewed Journal, Referred Journal

# ಕರ್ನಾಟಕದ ಪಶ್ಚಿಮಘಟ್ಟಗಳ ಶೈವ ದೇವಾಲಯಗಳು–ಒಂದು ಚಾರಿತ್ರಿಕ ನೋಟ

**ಡಾ.ಕೆ.ಎಸ್.ಬೆಟ್ಟಪ್ಪ.**[1]

ಪ್ರಾಚೀನ ದೇವಾಲಯಗಳ ಬಗೆಗೆ ತಿಳಿಯಲು ಶಾಸನಗಳಲ್ಲಿನ ಮಾಹಿತಿಯೂ ಅತಿ ಮುಖ್ಯವೇ ಆಗಿರುತ್ತದೆ. ದೇವಾಲಯಗಳಿಗೆ ಸಂಬಂಧಿಸಿದ ಶಾಸನಗಳಲ್ಲಿ ಬಹುತೇಕ ಶಾಸನಗಳು ದಾನ ಶಾಸನಗಳು. ದಾನ ಶಾಸನಗಳಿಂದ ದೇವಾಲಯಗಳಿಗೆ ನೀಡಿದ ದಾನದ ವಿವರ, ಕಾಲ, ಆಳ್ವಿಕೆ, ರಾಜವಂಶದಂಥ ವಿಷಯವನ್ನು ಸಂಪೂರ್ಣವಾಗಿಯೇ ಒದಗಿಸುತ್ತದೆ. ಹಾಗೆಯೇ, ಶಾಸನಗಳಲ್ಲಿ ದೇವಾಲಯದ ವರ್ಣನೆ, ವಿಶೇಷತೆ, ವಾಸ್ತುಶಿಲ್ಪ, ಜೀರ್ಣೋದ್ಧಾರ, ನಂದಾದೀಪ, ನಿತ್ಯಪೂಜೆ, ಅಂಗಭೋಗ, ರಂಗಭೋಗ, ಧೂಪ–ದೀಪ–ನೈವೇದ್ಯ, ಗಂಧ–ಅಕ್ಷತೆ ಪೂಜೆಗಳು, ಉತ್ಸವಗಳು, ಹಬ್ಬ, ಪಂಡಿತರ ವಿವರಗಳು ಹಾಗೂ ಕೆಲವು ಶಾಸನಗಳಲ್ಲಿ ದೇವಾಲಗಳ ನಿರ್ಮಾತೃಗಳು, ಯಾವ ಉದ್ದೇಶಕ್ಕೆ, ಯಾವ ಕಾರ್ಯಕ್ಕೆ ದಾನ ನೀಡಿದ್ದಾರೆ ಎಂಬ ಮಾಹಿತಿ ಮತ್ತು ಅದನ್ನು ನಿರ್ಮಿಸಿದ ಶಿಲ್ಪಿಗಳ ಹೆಸರಿನಂಥ ಮಹತ್ವದ ಅಂಶಗಳು ಕಾಣಸಿಗುತ್ತವೆ. ಕೆಲವು ಶಾಸನಗಳಲ್ಲಿ ರಾಜಕೀಯದ ವೈಭವೀಕರಣವಿದ್ದರೂ, ಪುಣ್ಯಪ್ರಾಪ್ತಿಗಾಗಿ ದಾನ–ಧರ್ಮ ಮಾಡಬೇಕು ಹಾಗೂ ಕಾಪಾಡಿಕೊಂಡು ಹೋಗಬೇಕು ಎಂಬುದು ನಮ್ಮ ಹಿರಿಯರ ನಂಬಿಕೆಯಾಗಿರುತ್ತದೆ. ಈ ನಂಬಿಕೆಗಳು ಆಚರಣೆಗಳ ರೂಪ ಪಡೆದಾಗ ಸಂಸ್ಕೃತಿಯ ಬೆಳವಣಿಗೆಗೆ ಹೆಚ್ಚು ಹೆಚ್ಚು ಸಹಾಯಕವಾಗುತ್ತವೆ. ಧರ್ಮ ಕಾರ್ಯಗಳನ್ನು ಸರ್ವರು ಆಚರಿಸಬೇಕು, ಅವುಗಳ ಬಗೆಗಿನ ಮಾಹಿತಿ ಮತ್ತು ದಾನ ಕಾರ್ಯಗಳು ಶಾಶ್ವತವಾಗಿ ಉಳಿಯಬೇಕು ಎಂಬ ಉದ್ದೇಶದಿಂದ ಶಾಸನಗಳಲ್ಲಿ ದಾಖಲಿಸಿದ್ದರೆ. ಪಶ್ಚಿಮಘಟ್ಟದ ಕೆಲವು ಶೈವ ದೇವಾಲಯಗಳಿಗೆ ಸಂಬಂಧಿಸಿದ ಘನೀಭೂತ ಅಂಶಗಳನ್ನು ಈ ಮುಂದಿನಂತೆ ದಾಖಲೀಸಿರುವಂಥ ಕೆಲವು ಶಾಸನಗಳು ಪ್ರಸ್ತುತ ಪಡಿಸುತ್ತವೆ ಎಂದು ಹೇಳಬಹುದು.

ತಾಳಗುಂದದ ಉತ್ತರದಲ್ಲಿರುವ ಪ್ರಣವೇಶ್ವರ ದೇವಾಲಯದ ಶಿಲಾಶಾಸನ, ಹಳೆಗನ್ನಡ ಲಿಪಿಯಲ್ಲಿದ್ದು, ಈ ಶಾಸನವು ದೇವಾಲಯ ಮತ್ತು ಅವುಗಳ ಜೊತೆಗೆ ಇದ್ದ ಮಠಗಳ ಎಲ್ಲಾ ಕಾರ್ಯಗಳನ್ನು ಗಮನಿಸಿ ನೀಡುತ್ತಿದ್ದ ದಾನದ ವಿವರಗಳನ್ನು ಈ ಶಾಸನವು ಒದಗಿಸುತ್ತದೆ. ಧರ್ಮ ಪ್ರಸಂಗದ ಮೂಲಕ ದಾನದ ಫಲವನ್ನು ವಿವರಿಸುತ್ತಾ, ಶಾಸನವು ಕೇಶವ ದಂಡನಾಯಕನು ಸ್ಥಾಣಗೂಡ ಗ್ರಾಮಕ್ಕೆ ಬಂದು, ಅಲ್ಲಿನ ಶ್ರೀಪ್ರಣವೇಶ್ವರ ದೇವರಿಗೆ ವಿಶೇಷ ಪೂಜೆಯನ್ನು ಮಾಡಿಸಿ,

[1].**ಸಂಶೋಧನಾ ಸಹಾಯಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು.**

ಸ್ಥಾನಗೂಡ ಗ್ರಾಮದ ಮೂವತ್ತೆರಡು ಸಾವಿರ ಮಹಾಜನಗಳು, ಸ್ವಯಂಪಾಕಿ ದೇವರು, ಅನುಭವಣಿಕಾರ ಹೆರ್ಗ್ಗಡೆ, ಕರಣ, ಮನ್ನೆಯ ಮುಂತಾದ ಸಮಸ್ತ ಪ್ರಭುಗಾವುಂಡಗಳು, ಹೆಗ್ಗಡೆ, ಕರಣಗಳ ಸನ್ನಿಧಿಯಲ್ಲಿ ದೇವರ ಅಂಗಭೋಗ, ರಂಗಭೋಗ, ನಿತ್ಯನೈಮಿತ್ತಿಕ ಪೂಜೆ, ಗಡ್ಡುಗೆ, ಬಲಿಹೋಮ, ಚೈತ್ರ, ಪವಿತ್ರ, ದೇವರ ಮಾಟಕೂಟ, ನವಕರ್ಮ, ನಾಲ್ಕು ವೇದಖಂಡಿಕ, ಎರಡು ಭಟವೃತ್ತಿ, ಕಂನಡಕ್ಷರ ಸಿಕ್ಷೆ, ಆರು ಫಳಯಾರ, ಖಂಡಿಕದ ಉಪಾಧ್ಯಾಯರು ಮತ್ತು ಛಾತ್ರರ ಗ್ರಾಸ (ಊಟ), ವಸ್ತ್ರ, ಸತ್ರ ಇತ್ಯಾದಿಗಳಿಗೆ, ಶಕ ವರ್ಷ 1079ನೆಯ ಈಶ್ವರ ಸಂವತ್ಸರದ ಪುಷ್ಯದ ಪೌರ್ಣಮಿ ಸೋಮವಾರ, ಉತ್ತರಾಯಣ ಸಂಕ್ರಮಣದಂದು, ಬನವಾಸಿ-12000ದ ಕಂಪಣ ನಾಗರಖಂಡ-70ರ ಬಳಿಯ ಬಾಡ ಹಿರಿಯತಗುಳದಿಂದ ತಾಣಗುಂದೂರ ನೈರುತ್ಯದ ಕೊನವನೆಯ ಬಯಲವರೆಗೆ ಭೂಮಿಯನ್ನು ಪೂರ್ವ ಮರ್ಯ್ಯಾದೆಯಾಗಿ ತ್ರಿಭೋಗಾಭ್ಯಂತರವಾಗಿ ದಾನ ನೀಡಿರುವುದನ್ನು ದಾಖಲಿಸಿದೆ. ಇದೇ ಅಲ್ಲದೇ ಈ ಶಾಸನವು ನಿತ್ಯದ ಪೂಜೆ, ಪ್ರತಿ ತಿಂಗಳು ನಿಶ್ಚಿತ ದಿನಗಳಲ್ಲಿ ನಡೆಸಬೇಕಾದ ನೈಮಿತ್ತಿಕಗಳು, ಪರ್ವದ ಆಚರಣೆಗಳು ಇವುಗಳ ಬಗೆಗೆ ವಿವರವಾದ ಮಾಹಿತಿ ಈ ಕೆಳಗಿನಂತಿದೆ.

"ನಿತ್ಯ ಗದ್ದುಗೆ ಪೂಜೆ, ಧೂಪಾರತಿ, ನೈವೇದ್ಯ, ನಂದಾದೀವಿಗೆ, ನಿತ್ಯ ಸಹಸ್ರತಿಳ ಹೋಮಗಳನ್ನು ನಿತ್ಯಂ ನಡೆಸುತ್ತ ತಿಂಗಳ್‌ತಿಂಗಳೊಳ್ ಎರಡು ಅಷ್ಟಾಮಿ, ಎರಡು ಚತುರ್ದಶಿಯ ಅಮಾವಾಸ್ಯೆ, ಪೌರ್ಣಮಾಸ್ಯೆ, ವ್ಯತೀಪಾತ ಸಂಕ್ರಮಣವೆಂಬ ಹಬ್ಬಗಳಲ್ಲಿ ನಿತ್ಯ ನೈಮಿತ್ತಿಕ ಪೂಜೆಯನ್ನು ಮಾಡಿ ಶಾಸ್ತ್ರದ ಉಪಾಧ್ಯಾಯರು ಶಿವಧರ್ಮ್ಮದಾನೆಯ ಶಾಂತ್ಯಾಧ್ಯಾಯವನ್ನು ಜಪವನ್ನು ಮಾಡಿ ಹೇಳಿದ ಕ್ರಮದಿಂದ ದೇವರೆಂಟು ದಿಕ್ಕಿನೊಳಗೆ ಮಂಡಲವನ್ನು ಮಾಡಿಯಲ್ಲಿಯ ಮಂತ್ರದಿಂ ಬಲಿಯನಿಕ್ಕಿ ದೇಶವನಾಳ್ವ ಕ್ಷತ್ರನಂ ಗೋಬ್ರಾಹ್ಮಣರುಮಂ ಯಜಮಾನನುಮಂ ಹರಸುವರು ಮತ್ತಂ ವರ್ಷದೊಳಗೆ ಬಹ ಮಹಾಪರ್ವಂಗಳ್ ಎರಡು ಆಯನ, ಎರಡು ವಿಷು, ಸೋಮ ಸೂರ್ಯಗ್ರಹಣದ ಆಶಾಡ, ಕಾರ್ತಿಕ, ಮಾಘ, ವೈಶಾಖದ ಪೌರ್ಣಮಿಗಳಲ್ಲಿ ಒಂದೊಂದು ದಿವಸದ ಪೂಜೆಯೂ, ತಿಂಗಳ ಫಳಮನೀಗುವಾ ಪರ್ಬ್ಬಗಳೊಳಗೆ ದೇವರಿಗೆ ಸಹಸ್ರಗಡ್ಡುಗೆಯಂ ಪ್ರಾರಂಭಿಸಿ ಪುಣ್ಯಾಹವಾಚನೆಯನ್ನು ಮಾಡಿ, ಶಾಸ್ತ್ರಖಂಡಿಕದವರು, ರಂಗದೊಳಗೆ, ವಿದ್ಯಾಮಂಡಳ, ಗುರುಮಂಡಳ, ಶಿವಮಂಡಳವೆಂಬ ಮಂಡಳ ತ್ರಯವಸುದ್ಧರಿ ಸಿಯರ್ಚ್ಚಿಸಿ ಶಾಂತಾಧ್ಯಾಯವನ್ನು ಜಪಿಸುವರು. ವೇದಖಂಡಿಕದ ನಾಲ್ವರು ನಾಲ್ಕು ಪ್ರಶಸ್ತ ಕಳಶಂಗಳಲ್ಲಿ ಉದಕಮಂ ತುಂಬಿ ಸರ್ವ್ವೌಷಧಿ ಗೋರೋಚನ ಸಿದ್ಧಾರ್ಥ ಪಂಚಪಲ್ಲವ, ಪಂಚವಲ್ಲಿ, ಪಂಚಗವ್ಯ, ವೇಲಾದಿ ಚಂದನಾದಿ, ಮಂಗಳ ದ್ರವ್ಯಂಗಳನಿಕ್ಕಿ, ನಾಲ್ಕು ದಿಕ್ಕಿನೊಳಿರ್ದ್ದು ನಾಲ್ಕು ವೇದದೊಳಗೊಣ ರುದ್ರಸೂಕ್ತಂಗಳನ್ನು ಜಪಂಗೆಯ್ವುದನಿಸಕ್ಕೆ ಗಡ್ಡುಗೆ ಪೂರ್ನ್ನವಾಗಲು ದೇವರ್ಗೆಂಟು ತೆಜದರ್ಥ್ಯ ಪಂಚಗವ್ಯ ಪಂಚಾಮೃತಮಂ ಮಾಡಿ ಯವೆಗೋಧುವೆಯಕ್ಕಿಯಹಿಟ್ಟಿನಿಂದ, ಬಿಸಿನೀರಿನಿಂದ, ನೆಲ್ಲಿಯರಿಸಿನದಿಂದ ಮಜ್ಜನವ ಮಾಡಿ ಕುಶೋದಕ, ಗಂಧೋದಕ, ಪುಷ್ಪೋದಕ, ಫಳೋದಕ, ಸುವರ್ನ್ನೋದಕ, ರತ್ನೋದಕದಿಂದ ಸ್ನಪನವನ್ನು ಮಾಡಿಯನಂತರವಾ ನಾಲ್ಕು

ಕಳಶವಂ ಪಿಡಿದು ಸಮುದ್ರಪೂರ್ವಕವಪು ಋಗ್ವೇದದ ಮೂರುಂ ಋಚಿಗಳಿಂ ಮಂಗಳಾಭಿಷೇಕವನ್ನು ಮಾಡಿ ಪಂಚಸೌಗಂಧ ಗಂಧಗಳಿಂದ ಪೂಸಿವಸ್ತ್ರಾಳಂಕಾರಮುಪವೀತ ಮಧುಪರ್ಕ್ಕವಾಚಮನೀಯ, ಪುಷ್ಪಪೂಜೆ ಪುಷ್ಪಫಳ, ಪಕ್ವಾಂನ ಮಂಟಪ ಧೂಪ ಘ್ರಿತ ದೀಪಾರತಿಗಳಂ ಕೊಟ್ಟು ನಾಲ್ಕು ತಳಿಗೆಯಲು ಪಂಚರಂಗದಕ್ಕಿಯಿಂದೊಪ್ಪಂ ಮಾಡಿ ಹಿಟ್ಟಿನ ಸೊಡರ ದಧಿದೂರ್ವ್ವವೆರಸಾರಿತಿಯಂ ನಿವಾಳಿಸುವಲ್ಲಿ ಮಂಗಳ ಗೀತಾ ವಾದ್ಯಾನಕ ತೂರ್ಯ್ಯ ಶಂಖ ಕಹಳಾರವದಿಂ ಮಾಡಿ, ಪಾಯಸ ಘೃತ ಭಕ್ಷ ಭೋಜ್ಯಾನಂದಾನಪಾನಾದಿಗಳಿಂದ ನೀವೇದ್ಯಾಚಮನೀಯ ಕೈಘಟ್ಟಿ ತಾಂಬೂಳಮಂ ಕೊಟ್ಟಾ ಪರ್ವ್ವಂಗಳಲಯುತ ಹೋಮ ಬಲಿಗ್ರಾಮದ ಸಮಸ್ತ ದೇವತಾ ಪೂಜೆಯಂ ಮಾಡುವುದಲ್ಲಿ ಉತ್ತರಾಯಣದೊಳು ದೇವರಿಗೆ ನೂರು.... ತುಪ್ಪದಿಂ ಸ್ನಪನಂ ಮಾಡಿ ಸಾಯಿರದೆಂಟು ಕಂನ್ನೈದಿಲೆ ಹೂವಿಂದೊಂದೆ ಮಾಲೆಯನ್ನು ಮಾಡಿ ಪೂಜಿಸುವುದು ಮಾಘದ ಪೌರ್ಣಮಿಯಲ್ಲಿ ಘೃತಕಬಳವಂ ಮಾಡುವುದು ಚೈತ್ರದೊಳಗೆ ಮಹಾ ಪೂಜೆಯನ್ನು ಮಾಡಿ, ಮಹಾರಥದೊಳಕ್ಕೆ ರಾಜಾಧಿರಾಜನೊಳಕ್ಕೆ ದೇವರ ಬಿಜಯಂಗೆಯ್ಸಿಛತ್ರ ಚಾಮರ ಧ್ವಜ ಕಳಶಂ ಕಂನಡಿ ಭೇರೀ ಮಂಗಳತೂರ್ಯ್ಯಂ ಶಂಖ ಕಹಳಾರವಂ ಕೈಯ್ದೀವಿಗೆ ಗೀತವಾದ್ಯನೃತ್ಯದಿಂ ಗ್ರಾಮವೀಧಿಯೊಳ್ತುಳಲ್ಚಿ ಬರಿಸಿ ನಿಲ್ಲಿಸುವುದು." ವಿವಿಧ ಪರ್ವಗಳ, ವಿಶೇಷವಾಗಿ ಮಹಾ ಪರ್ವಗಳ ಆಚರಣೆಯ ಬಗೆಗೆ ವಿವರವಾದ ಮಾಹಿತಿಯನ್ನು ನೀಡಿದೆ. ಹೀಗೆ, ಇಷ್ಟು ವಿವರವಾಗಿ ಮಾಹಿತಿಯನ್ನು ನೀಡಿರುವ ಶಾಸನ ಬಹಳ ವಿರಳವೇ ಸರಿ.

ಈ ಶಾಸನದಲ್ಲಿ ಎರಡು ಆಯನಗಳು (ಉತ್ತರಾಯನ ಮತ್ತು ದಕ್ಷಿಣಾಯನ), ಎರಡು ವಿಷು (ಸಂಕ್ರಮಣಗಳು), ಗ್ರಹಣಗಳು, ಆಷಾಢ, ಕಾರ್ತಿಕ, ಮಾಘ, ವೈಶಾಖದ ಹುಣ್ಣಿಮೆಗಳು ಇವು ಮಹಾಪರ್ವಗಳು ಎಂದು ದಾಖಲಿಸಿರುವುದಲ್ಲದೆ ಚೈತ್ರದಲ್ಲಿ ಮಹಾಪೂಜೆಯನ್ನು ಮಾಡಿ ರಥೋತ್ಸವ ಮಾಡಿಸುವುದಕ್ಕೂ ಶಾಸನವು ಸೂಚನೆ ನೀಡಿದೆ.

ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯದ ಪ್ರಾಕಾರದಲ್ಲಿರುವ ಹದಿಮೂರನೆಯ ಕಲ್ಲಿನ ಹಳೆಗನ್ನಡ ಲಿಪಿಯ ಶಿಲಾಶಾಸನವು ಹೊಯ್ಸಳ ಬಲ್ಲಾಳದೇವ ಹಾಗೂ ಅವನ ಮಹಾಪ್ರಧಾನ ದಂಡನಾಯಕನು, ಸರ್ವಾಧಿಕಾರಿಯೂ ಆದ ಯೆರೆಯಣ್ಣನ ಕುರಿತು ವರ್ಣಿಸಿದೆ. ಅಲ್ಲದೆ ಕೇದಾರೇಶ್ವರ ದೇವಾಲಯದ ಯತಿ ವಾಮಶಕ್ತಿ ದೇವರನ್ನು ಕುರಿತು ಸುಧೀರ್ಘವಾದ ವರ್ಣನೆಯನ್ನು ಹೊಂದಿದೆ. ಒಂದು ದಿನ ಹೊಯ್ಸಳ ಶ್ರೀಬಲ್ಲಾಳ ದೇವನ ಮಹಾಪ್ರಧಾನ ದಂಡನಾಯಕ ಮತ್ತು ಸರ್ವಾಧಿಕಾರಿಯು ಆದ ಯೆರೆಯಣ್ಣನು ದೇವಾಲಯಕ್ಕೆ ಬಂದು ಕೇದಾರೇಶ್ವರ ದೇವರ ಸ್ಥಳ, ಆ ದೇವಾಲಯದ ಸ್ಥಾನಾಚಾರ್ಯರಾದ ಶ್ರೀಮದ್‌ರಾಜಗುರು ವಾಮಶಕ್ತಿ ದೇವರ ತಪಃ ಪ್ರಭಾವ, ಆ ಮಹಾನುಭಾವರ ಯಮನಿಯಮ, ಸ್ವಾಧ್ಯಾಯ, ಧ್ಯಾನ, ಧಾರಣ, ಮೌನ, ಅನುಷ್ಠಾನ, ಜಪ, ಸಮಾಧಿ, ಶೀಲಸಂಪನ್ನ, ಅಷ್ಟಾಂಗ ಯೋಗ, ನಿಷ್ಠೆ, ಪ್ರತಿಷ್ಠಿತ ನೈಷ್ಠಿಕರು (ಬ್ರಹ್ಮಚಾರಿಗಳು), ಅವರ ಸಂತತಿ, ಭಕ್ತಸಮೂಹ, ಸಂಚರರು, ಯತಿಯ ಯೋಗ ಸಾಮರ್ಥ್ಯ, ಆತನ ಶಿಕ್ಷಣ ಪಟ್ಟಿಗೆ ಸೇರ್ಪಡಿಸಲಾದ ಹಲವು ಅಸಾಧ್ಯ

ವಿಷಯಗಳು ಅದರಲ್ಲೂ ತತ್ವಶಾಸ್ತ್ರ, ತರ್ಕಶಾಸ್ತ್ರ, ಕಾವ್ಯ ಹಾಗೂ ವ್ಯಾಕರಣ, ಅರಸರ ಮೇಲೆ ಅವನಿಗಿದ್ದ ಪ್ರಭಾವ, ಶಿಕ್ಷಣ ನೀಡುವಲ್ಲಿ ಅವನ ದಾನ–ಧರ್ಮ, ಶಿವಭಕ್ತಿ ಹಲವು ಮಂತ್ರಗಳ ಮೇಲೆ ಅವನಿಗಿರುವ ಹಿಡಿತ, ಅಲ್ಲದೆ ದೇವಾಲಯದಲ್ಲಿ ನಡೆಯುತ್ತಿದ್ದ ಅನ್ನದಾನ, ಸುವರ್ಣದಾನ, ಕನ್ಯಾದಾನ, ಗೋದಾನ, ಭೈಷಜ್ಯ ಇತ್ಯಾದಿ ಅನೇಕ ದಾನ ಪ್ರಸಂಗಗಳನ್ನು ಕಂಡು ದಕ್ಷಿಣ ಕೇದಾರೇಶ್ವರ ದೇವರ ಪೂಜೆ, ನೈವೇದ್ಯ, ನಂದಾದೀವಿಗೆಗೆ, ಚೈತ್ರಪವಿತ್ರಗಳು ಸೇರಿದಂತೆ ಅನೇಕ ಭೋಗಗಳಿಗೆ, ತಪೋಧನರ ಆಹಾರ ದಾನಕ್ಕೆ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಸಾಂತಳಿಗೆ ನಾಡಿನ ಮುದ್ಧಕುಂದಾನಿಯ ವೃತ್ತಿಯೊಳಗಿನ ಚೀಯನ ಸಾಲಿವೂರನ್ನು ಎಲ್ಲಾ ತೆರಿಗೆಗಳನ್ನು ರದ್ದುಗೊಳಿಸಿ ಸರ್ವಮಾನ್ಯವಾಗಿ, ಕಟ್ಟಗುತ್ತಿಗೆ ಪಿಂಡಾದಾನವನ್ನು ಸರ್ವಭಾದಾ ಪರಿಹಾರವಾಗಿ ಚಂದ್ರಾರ್ಕಸ್ಥಾಯಿಯಾಗಿ ಸಲುವಂತೆ ಶಕವರ್ಷ 1114ನೆಯ ಪರಿಧಾವಿ ಸಂವತ್ಸರದ ಪುಷ್ಯ ಬಹುಳ ೫ ಶುಕ್ರವಾರ ಉತ್ತರಾಯಣ ಸಂಕ್ರಮಣದಂದು ಶ್ರೀಮನ್ ರಾಜಗುರು ವಾಮಶಕ್ತಿ ದೇವರ ಕಾಲನ್ನು ತೊಳೆದು ತನ್ನ ಮಹಾರಾಜನಿಂದ ಧಾರಾಪೂರ್ವಕವಾಗಿ ಮಾಡಿಸಿಕೊಟ್ಟನು ಎಂಬುದಾಗಿ ಉಲ್ಲೇಖಿಸಿದೆ.

ಅದೇ ಕೇದಾರೇಶ್ವರ ದೇವಾಲಯದ ಪ್ರಾಕಾರದಲ್ಲಿರುವ ಹಳೆಗನ್ನಡ ಲಿಪಿಯ ಆರನೆಯ ಕಲ್ಲಿನ ಶಾಸನದಲ್ಲಿ ಬಿಜ್ಜಳ ದೇವನ ವರ್ಣನೆಯನ್ನು ಹೇಳದ್ದು, ಅನಂತರದಲ್ಲಿ ಅವನ ಮಗ ರಾಯಮುರಾರಿ ಸೋವಿದೇವನ ಬಗೆಗೆ ಕೂಡ ಹೇಳಲಾಗಿದೆ. ರಾಯಮುರಾರಿ ಸೋವಿದೇವನು ತನ್ನ ಸೇನಾಧಿಕಾರಿಗಳಾದ ದಂಡನಾಯಕನಾಗಿದ್ದಂಥ ಲಕ್ಷ್ಮಿದೇವ, ಬಾಹತ್ತರ ನಿಯೋಗ ಅಧಿಷ್ಟಾಯಕನಾಗಿದ್ದಂತಹ ಚಂಡುಗಿದೇವ, ವಸುದೇಕ ಬಾಂಧವನಾದಂತಹ ರೇಚಣಯ್ಯ ದಂಡನಾಯಕ, ಸರ್ವಾಧಿಕಾರಿಯಾದಂಥ ಸೋವಣಯ್ಯ ದಂಡನಾಯಕ, ಸಮಸ್ತ ಸೇನೆಗೆ ಅಗ್ರೇಶನಾಗಿದ್ದಂಥ ಕಾವಣಯ್ಯ ದಂಡನಾಯಕ ಇವರೆಲ್ಲರೊಂದಿಗೆ ದಕ್ಷಿಣ ಭಾಗದಲ್ಲಿದ್ದಂತಹ ಬಳ್ಳಿಗಾವೆಗೆ ಬಂದನು. ಆಗ ಇಲ್ಲಿನ ಕೇದಾರೇಶ್ವರ ದೇವಾಲಯದ ಲತಾಮಂಟಪ, ಕೂಟ, ಪೂಜೆಗಳು, ಸ್ವರ್ಣಕಳಶಗಳು, ಇಲ್ಲಿ ನಡೆಯುತ್ತಿದ್ದ ವಿದ್ಯಾದಾನ ಅನ್ನದಾನವೆಲ್ಲವನ್ನು ನೆಡೆಯುತ್ತಿದ್ದುದನ್ನು ಕಂಡು ಸಂತೋಷಗೊಂಡು ಅಲ್ಲದೆ, ಶ್ರದ್ಧೆಯ ಪಾಣಿನಿಯ ಹಾಗೆ, ಪಂಡಿತದಲ್ಲಿ ಭೂಷಣಾಚಾರ್ಯರಿದ್ದಂತೆ, ನಾಟ್ಯದಲ್ಲಿ ಭರತ ಮುನಿಯಂತೆ, ಕಾವ್ಯದಲ್ಲಿ ಮಾಘನಾಗಿದ್ದಂತೆ, ಸಿದ್ಧಾಂತದಲ್ಲಿ ಸ್ವಯಂ ಲಕುಳೀಶನಿದ್ದಂತೆ, ಶಿವರೂಪದಲ್ಲಿ ಸ್ಕಂಧನಿದ್ದಂತೆ, ಸ್ವಭಾವ ಮತ್ತು ಗುಣಗಳಲ್ಲಿ ಅತ್ಯಂತ ಶ್ರೇಷ್ಠನಾದಂತಹ ರಾಜಗುರು ವಾಮಶಕ್ತಿದೇವರನ್ನು ನೋಡಿ ಸಂತೋಷಗೊಂಡು, ತನ್ನ ಆಳ್ವಿಕೆಯ ಐದನೆಯ ವರ್ಷದ ವಿಕಾರಿನಾಮ ಸಂವತ್ಸರದ ವಿಶಾಖ ಮಾಸದ ಸೋಮವಾರದಂದು ಕೇದಾರೇಶ್ವರ ದೇವರ ಅಂಗಭೋಗ, ರಂಗಭೋಗ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಮತ್ತು ಅಲ್ಲಿದ್ದ ತಪೋಧನರ, ಬ್ರಾಹ್ಮಣರ ಆಹಾರಕ್ಕೆಂದು ಜಿದ್ದುಳಿಗೆ ಕಂಪಣದ ಬಳಿಯ ಬಾಡಂಕಿ, ಕಿರುಬಳ್ಳಿಗಾವೆಯನ್ನು ಅಲ್ಲಿನ ಸ್ಥಾನಾಚಾರ್ಯರು, ರಾಜಗುರುಗಳು ಆಗಿದ್ದಂಥ ವಾಮಶಕ್ತಿದೇವರ ಕಾಲನ್ನು ತೊಳೆದು

ಧಾರಾಪೂರ್ವಕವಾಗಿ ದಾನವನ್ನು ನೀಡಿದನು. ಅನಂತರ ಇದೇ ಶಾಸನದಲ್ಲಿಯೇ ಎರಡನೇ ಶಾಸನ ಮುಂದುವರೆಯುತ್ತದೆ. ಮಹಾಮಂಡಳೇಶ್ವರನಾಗಿದ್ದಂಥ ತೈಲಹದೇವ ಮತ್ತು ಮಹಾಮಂಡಳೇಶ್ವರರಾದ ಯರಹರಸನು ಬಂದು ಇಲ್ಲಿನ ಧರ್ಮವನ್ನು ನೋಡಿ ತಾವು ಕೂಡ ಏನಾದರೂ ದಾನ ಮಾಡಬೇಕೆಂದು ಧರ್ಮಬುದ್ಧಿಯನ್ನು ಇಟ್ಟುಕೊಂಡು ತಾವು ಅದೇ ದಿನದ ವಿಶಿಷ್ಟ ತಿಥಿಯಲ್ಲಿ ಕೇದಾರೇಶ್ವರ ದೇವರ ಮಹಾನ್ಯೆವೇದ್ಯಕ್ಕೆ ಮತ್ತು ನಂದಾದೀವಿಗೆಗೆ ಜಿದ್ದುಳಗೆ ನಾಡ ಬಳಯ ಬಾಡಂಕಿಯ ಬಳ್ಳಿಗಾವೆಯ ಮನೆಯಮುಮಂ ಕಿರುಕುಳ ಆದಾಯ ಸಹಿತವಾಗಿ ಸರ್ವವನ್ನು ಶ್ರೀಮತ್ ರಾಜಗುರು ವಾಮಶಕ್ತಿ ದೇವಾರ ಪಾದವನ್ನು ತೊಳೆದು ಧಾರಾಪೂರ್ವಕವಾಗಿ ಸೂರ್ಯ ಚಂದ್ರರ ಸಾಕ್ಷಿಯಾಗಿ ದಾನವನ್ನು ನೀಡಿದುದನ್ನು ಉಲ್ಲೇಖಿಸಿದೆ.

ಹಿರಿಯೂರಿನ ಸಿದ್ಧೇಶ್ವರ ದೇವಾಲಯದ ದಕ್ಷಿಣ ಕಡೆ ನೆಟ್ಟಿರುವ ಅದೇ ಕಲ್ಲಿನ ಮೇಲೆ ಹಳೆಗನ್ನಡ ಲಿಪಿಯ ಶಿಲಾಶಾಸನವು ಬಹುತೇಕ ತ್ರುಟಿತಗೊಂಡಿರುವ ಈ ಶಾಸನವು ದುದುಂಬಿ ಸಂವತ್ಸರದ ಫಾಲ್ಗುಣ ಶುದ್ಧ ಪಾಡಿವ ಸೋಮವಾರದಂದು ಬೊಪ್ಪಗೌಡ ಮತ್ತು ಗೋವಿಂದಗೌಡರು, ಸಿದ್ಧೇಶ್ವರ ದೇವರ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ, ಆಹಾರ ದಾನಕ್ಕೆ ಮತ್ತಿತರ ದೇವಕಾರ್ಯಗಳಿಗೆ ಹತ್ತು ಕಂಬ ಬೆದ್ದಲೆ ಭೂಮಿ, ಇಪ್ಪತ್ತು ಕಂಬ ಗದ್ದೆ, ಮೂರು ಕಂಬ ತೋಟವನ್ನು ದಾನ ನೀಡಿರುವುದನ್ನು ತಿಳಿಸುತ್ತದೆ. ಅದೇ ದೇವಾಲಯದ ಇನ್ನೊಂದು ಹಳೆಗನ್ನಡ ಲಿಪಿ ಶಾಸನವು ಬಹುತೇಕ ತ್ರುಟಿತಗೊಂಡಿರುವ ಈ ಶಾಸನವು ಚಾಲುಕ್ಯ ತ್ರಿಭುವನಮಲ್ಲನ ಕಾಲದಲ್ಲಿ ಅವನ ಅಧೀನನಾಗಿ ಗಂಗ ದೊರೆ ನನ್ನೀಯಗಂಗ ಪೆರ್ಮಾಡಿದೇವನು ಯಡೆಹಳ್ಳಿಯನ್ನು ಆಳುತ್ತಿದ್ದನು. ಆಗ ಯಡೆದೊರೆ ಎಪ್ಪತ್ತರ ನಾಳ್ಪ್ರಭು ಸಿಂಧಗಾವುಂಡ ಮತ್ತು ಅವನ ಹೆಂಡತಿ ನಾಗಗಾವುಂಡಿ, ಚಾಲುಕ್ಯ ವಿಕ್ರಮ ಶಕ ಒಂಬತ್ತು ಶುಭಕೃತ ಸಂವತ್ಸರದ ಉತ್ತರಾಯಣ ಸಂವತ್ಸರ, ಸೂರ್ಯಗ್ರಹಣದ ವ್ಯತೀಪಾತದ ಪುಣ್ಯಕಾಲದಲ್ಲಿ ಶ್ರೀಮತ್ ಸಿದ್ಧೇಶ್ವರ ದೇವರ ಅಂಗಭೋಗಕ್ಕೆ, ರಂಗಭೋಗಕ್ಕೆ, ಆಹಾರದಾನಕ್ಕೆ, ದೇವಾಲಯದ ಜೀರ್ಣೋದ್ಧಾರಕ್ಕೆಂದು ಭೂಮಿಯನ್ನು ಸಿದ್ಧೇಶ್ವರ ದೇವರ ಆಚಾರ್ಯರಾದ ಬ್ರಹ್ಮೇಶ್ವರದೇವರ ಕಾಲನ್ನು ತೊಳೆದು ಧಾರಾಪೂರ್ವಕವಾಗಿ ನೀಡಿದ್ದನ್ನು ಉಲ್ಲೇಖಿಸಿದೆ.

ಬಿದರೆ ಸಾಲೇಶ್ವರ ದೇವಾಲಯದ ಹಿಂದೆ ಏರಿಯ ಮೇಲೆ ಬಿದ್ದಿರುವ ಕಲ್ಲು ಹಳೆಗನ್ನಡ ಲಿಪಿ ಶಾಸನವು ಬಹುತೇಕ ತೃಟಿತಗೊಂಡಿರುವ ಈ ಶಾಸನವು ಹೊಯ್ಸಳ ಅರಸ ಬಲ್ಲಾಳನನ್ನು ಉಲ್ಲೇಖಿಸಿದೆ. ಶಾಸನದ ಕಾಲಮಾನ ಶಕ ವರ್ಷ 1089 ಎಂದಿದ್ದು ಆಗ ಆಳ್ವಿಕೆ ನಡೆಸುತ್ತಿದ್ದವನು ನರಸಿಂಹ. ಶಾಸನವು ಪಟವಳ ಹೆಮ್ಮಡಿ ಎಂಬುವವನು ತನ್ನ ತಾಯಿ ಹಡವಳತಿ ಕಲ್ಲವ್ವೆಯ ಹೆಸರಿನಲ್ಲಿ ಕಲ್ಲೇಶ್ವರ ದೇವಾಲಯವನ್ನು ನಿರ್ಮಿಸಿದನೆಂದು ತಿಳಿಸುತ್ತದೆ. ಅನಂತರ ಇದು ಹೆಮ್ಮಡಿಯ ಮಗನಾದ ಪಡವಳ ಕಾಳಯ್ಯನು ಈ ದೇವಾಲಯವನ್ನು ಕಲ್ಲಿನಲ್ಲಿ ನಿರ್ಮಿಸಿ ದೇವರಿಗೆ ನಿರ್ದಿಷ್ಟ ಭೂಮಿಯನ್ನು ನೀಡಿರುವುದನ್ನು ದಾಖಲಿಸಿದೆ. ಈ ದಾನವನ್ನು ಕಲ್ಯಾಣಪಡಿಂತರಿಗೆ ಕಾಲನ್ನು ತೊಳೆದು

ಧಾರಾಪೂರ್ವಕವಾಗಿ ನೀಡಲಾಯಿತು ಎಂದು ಹಾಗೂ ಈ ದೇವಾಲಯದ ಗರ್ಭಗೃಹವನ್ನು ಕಟ್ಟಿದವನು ಮಲ್ಲೋಜ. ಶಾಸನವನ್ನು ಕಂಡರಿಸಿದವನು ಕಂಚಗಾರ ಬಸವೋಜ ಉಲ್ಲೇಖಿಸಿದೆ.

ಕೂಡ್ಲಿ ರಾಮೇಶ್ವರ ದೇವಾಲಯದ ದಕ್ಷಿಣಪಾರ್ಶ್ವದಲ್ಲಿ ನೆಟ್ಟಿರುವ ಎರಡನೆಯ ಕಲ್ಲಿನ ಮೇಲೆ ಹಳೆಗನ್ನಡ ಲಿಪಿ ಶಿಲಾಶಾಸನವು ವಿಜಯನಗರ ಅರಸ ಒಂದನೇ ದೇವರಾಯನ ಆಡಳಿತಾವಧಿಗೆ ಸೇರಿದ್ದು, ಆರಗ ರಾಜ್ಯವನ್ನು ಆಳುತ್ತಿದ್ದ ದೊರೆ ವಿಠ್ಠಣ್ಣನು ಒಂದನೆಯ ದೇವರಾಯನ ಆಜ್ಞೆಯ ಮೇರೆಗೆ ಶ್ರೇಷ್ಠವಾದ ತುಂಗಭದ್ರಾ ಸಂಗಮ ದಕ್ಷಿಣವಾರಣಾಸಿ ಮಹಾಪ್ರಯಾಗವಾದ ಕೂಡಲಿಯ ರಾಮನಾಥ ದೇವರಲಿ ಪುರಾಣವ ಹೇಳುವ ವೆಂಕಣ್ಣ ಉಪಾಧ್ಯಾಯರಿಗೆ ಹಸನವಾಡಿ ಗ್ರಾಮದಿಂದ ಅರಮನೆಗೆ ಪಾವತಿಸಲಾಗುತ್ತಿದ್ದ 15 ಗದ್ಯಾಣವನ್ನು ನೀಡಿದ್ದನು ದಾಖಲಿಸಿದೆ. ಈ ಶಾಸನವನ್ನು ಬರೆದವನು ವಿಠ್ಠಣ್ಣ.

ಕುಸ್ಕೂರು ಭೀಮೇಶ್ವರ ದೇವಾಲಯದ ರಂಗಮಂಟಪದೊಳಗೆ ವಾಯುವ್ಯ ಮೂಲೆಯಲ್ಲಿ ನೆಟ್ಟಿರುವ ಕಲ್ಲಿನ ಮೇಲೆ ಹಳೆಗನ್ನಡ ಲಿಪಿ ಶಾಸನವು ಹೊಯ್ಸಳ ಅರಸ ಮೂರನೇ ವೀರಬಲ್ಲಾಳನು ದೋರಸಮುದ್ರದಲ್ಲಿ ಸುಖಸಂಕಥಾ ವಿನೋದದಿಂದ ರಾಜ್ಯವನ್ನು ಆಳುತ್ತಿರುವಾಗ ಆ ರಾಯನ ಮನೆಯ ಸಂಧಿವಿಗ್ರಹಿ ಲಕ್ಕಣ್ಣನವರ ಬಲುಮನುಷ್ಯ ದೇವಪ್ಪ ಹರಿಯಪ್ಪನವರು ಹಡವಳಿಕೆ ನಾಡಿಗೆ ಸರ್ವಾಧಿಕಾರಿಗಳಾಗಿದ್ದಾಗ ಗಂಗ ಮಂಡಳ ಹಡವಳಕನಾಡ ಅರವತ್ತು ಗೌಡರು, ನೂರಿಪತ್ತು ಸ್ತಾನ, ಸಾವಿರದ ಏಳುನೂರು ಗವರೆ ಗಂಡರು ಕುಸ್ಕೂರಿನಲ್ಲಿ ನೆರೆದು ಹಡವಳನಾಡ ಸರ್ವಾಧಿಕಾರಿ ದೇವಪ್ಪ ಹರಿಯಪ್ಪನವರಿಗೆ ಸ್ವಯಂ ಭೂ ಲಿಂಗ ದಿವ್ಯ ಕ್ಷೇತ್ರ ಘಟಿತ ಸ್ಥಾನವೆಂದು ಘೋಷಿಸಿ ಇದಕ್ಕೆ ಎಲ್ಲಾ ತೆರಿಗೆಳಿಂದ ಮುಕ್ತಗೊಳಿಸಿ ಭೀಮನಾಥ ದೇವರಿಗೆ ಧಾರಾಪೂರ್ವಕವಾಗಿ ಬಿಟ್ಟಂತಹ ಧರ್ಮವನ್ನು ಉಲ್ಲೇಖಿಸಿದೆ.

ಹುಂಚ, ಕಮಠೇಶ್ವರ ದೇವಾಲಯದ ಮುಂದೆ ಶಿಲಾಶಾಸನವು ತೃಟಿತಗೊಂಡಿರುವ ಈ ಶಾಸನವು ಸಾಂತರ ದೊರೆಯ ಆಳ್ವಿಕೆಯ ಕಾಲಕ್ಕೆ ಸೇರಿದೆ. ಸೋವೆಯ ನಾಯಕ, ಕೋಟಿನಾಯಕ ಕುಮಾರ ಸೊಡ್ಡಲ ದೇವನು ಸಾಂತಳಿಗೆ ರಾಜ್ಯವನ್ನು ಏಕಚತ್ರದಿಂದ ಆಳುತ್ತಿರುವಾಗ ಕಮಠೇಶ್ವರ ದೇವಾಲಯವನ್ನು ಶಕವರ್ಷ 1209 ಸರ್ವಜಿತ್ ಸಂವತ್ಸರ, ಮಾಘ ಶು.10 ಆದಿವಾರದಂದು ಪುನಃ ಪ್ರತಿಷ್ಠಾಪನೆ ಮಾಡಿ, ಈ ದೇವಾಲಯಕ್ಕೆ ಪೊಂಬುಚದೊಳಗೆ ನರಿ–ವೃತ್ತಿ (ಹುಲ್ಲುಗಾವಲಿನ ತೆರಿಗೆ) ಅಂದಳದ ನಾದಗೆ (ಕಲ್ಲಕ್ಕಿ ಬಳನುವವರ ಮೇಲಿನ ತೆರಿಗೆ) ವಡಿಲಬಯಲು–ಹಾದಗೆ, ಎಲೆವಳಿಯ–ಹಾದಗೆ (ಎಲೆತೋಟದ ಮೇಲಿನ ತೆರಿಗೆ, ಮನೆವೂರ ಹಾದಗೆ (ಮನೆಗಳು ಮತ್ತು ಹಳ್ಳಿಗಳ ಮೇಲಿನ ತೆರಿಗೆ) ಮತ್ತು ಮತ್ತರು ಭೂಮಿ ಮುಂತಾದವನ್ನು ದಾರಾಪೂರ್ವಕವಾಗಿ ದಾನ ನೀಡಿದನು ಎಂಬುದಾಗಿ ದಾಖಲಿಸಿದೆ.

ಆರಗ, ಅಖಂಡೇಶ್ವರ ದೇವಸ್ಥಾನದ ಮುಂದೆ ಬಿದ್ದಿರುವ ಕಲ್ಲಿನ ಮೇಲೆ ಹಳೆಗನ್ನಡ ಲಿಪಿಯ ಶಾಸನವು ವಿಜಯನಗರ ಸಿರಿಗಿರಿನಾಥ ಒಡೆಯ ಎಂಬುವವನು ಶಿವರಾತ್ರಿಯ ಪುಣ್ಯದಿನದಂದು

ಆರಗದ ಅಖಂಡ ಬ್ರಹ್ಮೇಶ್ವರ ದೇವರ ನಂದಾದೀಪಕ್ಕೆ, ಅಮೃತಪಡಿಗೆ, ಕಾರ್ತಿಕ ಮಾಸದ ದೀಪಾರಾಧನೆಗೆ ಹಾಗೂ ಆ ದೇವಾಲಯದ ಛತ್ರಕ್ಕಾಗಿ 55 ವರಹಗಳನ್ನು ದಾನ ನೀಡಿರುವುದನ್ನು ದಾಖಲಿಸಿದೆ. ಶಾಸನದಲ್ಲಿ ವಿವರಗಳನ್ನು ನೀಡಲಾಗಿದ್ದು, ಶಾಸನ ಬಹುತೇಕ ತೃಟಿತಗೊಂಡಿರುವುದರಿಂದ ವಿವರಗಳು ತಿಳಿದುಬರುವುದಿಲ್ಲ. ಆರಗ, ಕಲಿನಾಥ ದೇವಾಲಯದ ಪ್ರಕಾರದಲ್ಲಿ ದಕ್ಷಿಣ ಕಡೆ ಗೋಡೆಗೆ ನೆಟ್ಟಿರುವ ಕಲ್ಲಿನ ಮೇಲೆ ಹಳೆಗನ್ನಡ ಭಾಷೆಯ ಶಿಲಾಶಾಸನದಲ್ಲಿ ವೀರಪ್ರತಾಪ ಹರಿಹರಮಹಾರಾಯರು ವಿಜಯ ನಗರದಲ್ಲಿ ವರ್ಣಾಶ್ರಮ ಧರ್ಮಗಳನ್ನು ಪಾಲಿಸುತ್ತ ಸುಖಸಂಕಥಾ ವಿನೋದದಿಂದ ಸಾಮ್ರಾಜ್ಯವನ್ನು ಆಳುತ್ತಿರುವಾಗ ಆ ರಾಯರ ನಿರೂಪದಿಂದ ಆರಗ ರಾಜ್ಯವನ್ನು ವೀರಪ್ಪ ಒಡೆಯರು ಪಾಲಿಸುತ್ತಿದ್ದರು. ಆಗ ಆರಗದ ವೇಂಠೆಯ ಹದಿನೆಂಟು ಕಂಪಣದ ಸಮಸ್ತ ನಾಡು, ಮೂರು ಪಟ್ಟಣದ ಸಮಸ್ತರೂ ತಾವು ಸರ್ವೈಕ್ಯಮತವಾಗಿ ಸರ್ವಾನುಮತದಿಂದ ಆರಗದ ಮೂಲಸ್ಥಾನ ಶ್ರೀಕಲಿನಾಥದೇವರ ಅಮೃತಪಡಿಗೆ ಮುದುವಂಕನಾಡ ಮೇಲುಭಾಗೆಯ ಒಳಗಿನ ಬೊಂದಿಯದ ಗ್ರಾಮದ 12 ಹೊನ್ನು ಗುತ್ತಿಗೆಯ ಭೂಮಿಯನ್ನು (ಮೇರೆ ಸಹಿತವಾಗಿ) ಲಿಂಗ ಮುದ್ರೆಯ ಕಲ್ಲುಗಳನ್ನು ನೆಡೆಸಿ ದಾನವಾಗಿ ಧಾರಾಪೂರ್ವಕವಾಗಿ ದಾರೆಯನೆರೆದು ಬಿಟ್ಟು ಕೊಟ್ಟಿದ್ದನ್ನು ದಾಖಲಿಸಿದೆ.

ದೇವಾಲಯಗಳು ಎಲ್ಲ ಕಾಲದಲ್ಲಿಯೂ ಯಾವುದೇ ತೊಂದರೆಗಳಿಲ್ಲದೆ ತಮ್ಮ ನಿತ್ಯ ಪೂಜಾದಿ ಧರ್ಮಕಾರ್ಯಗಳನ್ನು ನಡೆಸಿಕೊಂಡು ಹೋಗಬೇಕೆಂದು ಬಹಳಷ್ಟು ದಾನಗಳನ್ನು ನೀಡಿರುವುದನ್ನು ಮೇಲಿನ ಕೆಲವು ಪಶ್ಚಿಮಘಟ್ಟ ಶೈವ ಶಾಸನಗಳಿಂದ ನೋಡಬಹುದು. ಹಲವು ದೇವಾಲಯಗಳು ತಮ್ಮ ಮೂಲಸ್ವರೂಪವನ್ನು ಕಳೆದುಕೊಂಡು ಆಧುನಿಕ ರೀತಿಯಲ್ಲಿ ನಿರ್ಮಾಣಗೊಂಡಿವೆ. ಕೆಲವಾರು ದೇವಾಲಯಗಳು ಪಾಳುಬಿದ್ದಿವೆ ಹಾಗೂ ಯಾವ ದೇವಾಲಯಗಳಲ್ಲಿಯೂ ಶಾಸನೋಕ್ತ ದಾನಗಳು ಕಾಣಸಿಗುವುದಿಲ್ಲ.

## ಆಕರ ಗ್ರಂಥಗಳು


1. Epigraphia Carnatica, Vol VII and VIII Bangalore District, Government of Karnataka, 1905.
2. Annigere, A.M, **Karnataka Inscriptions,** Karnataka Research Institute Dharwad, 1976.
3. ಕಲಬುರ್ಗಿ,ಎಂ.ಎಂ, **ಕರ್ನಾಟಕದ ಕೈಫಿಯತ್ತುಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ., ಹಂಪಿ, 1994

4. ಅನಂತರಂಗಾಚಾರ್. ಎನ್, **ಭಾರತೀಯ ದೇವಾಲಯಗಳು ಮತ್ತು ಸಂಸ್ಕೃತಿ,** ಸ್ವಚ್ಛಂದಂ ಪ್ರಕಾಶನ, ಮೈಸೂರು, 1984.
5. ಚಿದಾನಂದ ಮೂರ್ತಿ. ಎಂ, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಸಪ್ನ ಬುಕ್ ಹೌಸ್, ಬೆಂಗಳೂರು, 1996.
6. ಕೊಸಾಂಬಿ.ಡಿ.ಡಿ, **ಪುರಾಣ ಮತ್ತು ವಾಸ್ತವ,** ಚಿಂತನ ಪುಸ್ತಕ, ಬೆಂಗಳೂರು, 2013
7. ದಿವಾಕರ ಆರ್.ಆರ್– ಕರ್ನಾಟಕ ಪರಂಪರೆ –ಸಂಪುಟ–1, ಬೆಂಗಳೂರು, 1992